**Spl.C. 3/2020.**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆಃ 3/2020.**

| | | | |
|---|---|---|---|
| ಹೆಸರು | : | ಅಡಿವೆಪ್ಪ ಶಿವಣ್ಣವರ | ಪ್ರಾಸಾ-22 |
| ತಂದೆಯ ಹೆಸರು | : | ಹಣಮಂತ | ಚಾಸಾ-39 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ತೊಂಡಿಕಟ್ಟಿ, ತಾಃ ರಾಮದುರ್ಗ | |

ದಿನಾಂಕಃ 03-10-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯವಿಲ್ಲ. ನಾನು ಪೋಲಿಸರ ಮುಂದೆ ಘಟನೆ ಬಗ್ಗೆ ಹೇಳಿಕೆ ನೀಡಿಲ್ಲ. ಏಕೆಂದರೆ ನನಗೆ ಘಟನೆ ಬಗ್ಗೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 15-10-2019 ರಂದು ನಾನು ಡಾಲ್ಮಿಯಾ ಎ.ಟಿ.ಎಂ ಗೆ ಹೋಗಿದ್ದೆ ಎನ್ನುವುದು ಸರಿಯಲ್ಲ. ಎಕ್ಸಿಸ್ ಬ್ಯಾಂಕನ ಡಾಲ್ಮಿಯಾ ಫ್ಯಾಕ್ಟರಿ ಹತ್ತಿರ ನಾನು ನನ್ನ ಗೆಳೆಯ ಶಿವಾನಂದ ಇವನ ಎ.ಟಿ.ಎಂ ಕಾರ್ಡ್ ಕೆಲಸ ಮಾಡದ ಕಾರಣ ಅವನು ತನ್ನ ಇನ್ನೊಬ್ಬ ಗೆಳೆಯ ವಿಜಯಕುಮಾರನಿಗೆ ಫೋನ್ ಮಾಡಿದ ಎನ್ನುವುದು ಸರಿಯಲ್ಲ. ಅಪರಿಚಿತ ವ್ಯಕ್ತಿ ಬಂದು ನನ್ನ ಮೊಬೈಲನಿಂದ ಫೋನ್ ಮಾಡಿದ್ದ ಎನ್ನುವುದು ಸರಿಯಲ್ಲ. ಫೋನನಲ್ಲಿ ಮಾತನಾಡಿದ ನಂತರ ನನಗೆ ಫೋನನ್ನು ಮರಳಿ ನೀಡಿದ್ದಾನೆ ಎನ್ನುವುದು ಸರಿಯಲ್ಲ. ದಿನಾಂಕಃ 30-11-2019 ರಂದು ಈಗ ಓದಿ ಹೇಳಿದ ನಿಪಿ-49 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

03-10-2024.
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.